ಇಂದು ದಿನಾಂಕ 10-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿಃ ಶ್ರೀ ಎಸ್.ಎಂ.ಬಿ. ವಕೀಲರಿಂದಃ**

ಆ ದಿನ ನಾವು ಖಾಸಗಿ ಬಸ್‌ನಲ್ಲಿ ಹೋಗುತ್ತಿದ್ದೆವು . ನಾವು ಹೊನ್ನಾವರದಿಂದ ಬೆಂಗಳೂರಿಗೆ ಹೋಗುತ್ತಿದೆವು. ಬಸ್‌ನಲ್ಲಿ ಅಂದಾಜು 40 ಜನ ಇದ್ದರು. ನಾನು ಡ್ರೈವರನ ಬದಿ ಮುಂದಿನ ಸೀಟಿನಲ್ಲಿ ಕುಳಿತಿದ್ದೆ . ಅದು 3 ಜನರು ಕುಳಿತುಕೊಳ್ಳುವ ಸೀಟಾಗಿತ್ತು. ನನ್ನ ಬದಿಗೆ ನನ್ನ ಸಂಬಂಧಿಕರ ಇಬ್ಬರು ಹೆಣ್ಣು ಮಕ್ಕು ಕುಳಿತಿದ್ದರು . ಅವರ ಹೆಸರು ಶಾಂತಿ, ಇನ್ನೊಬ್ಬಳ ಹೆಸರು ಗೊತ್ತಿಲ್ಲ. ನನ್ನ ಗಂಡ ಬೇರೆ ಸೀಟಿನಲ್ಲಿ ಕುಳಿತಿದ್ದರು. ಬಸ್ ಹೊನ್ನಾವರದಿಂದ ಮಧ್ಯಾಹ್ನ 2.00 ಗಂಟೆಗೆ ಹೊರಟಿತ್ತು. ಇಬ್ಬರು ಡ್ರೈವರ್ ಇದ್ದರು. ನಾವು ಬಸ್‌ನ್ನು ಹತ್ತುವಾಗ ಯಾವ ಡ್ರೈವರ್ ಓಡಿಸುತ್ತಿದ್ದರು ಮತ್ತು ಅಪಘಾತ ನಡೆದಾಗ ಯಾವ ಡ್ರೈವರ್ ಬಸ್ ಓಡಿಸುತ್ತಿದ್ದರು ಎಂದು ಅವರ ಹೆಸರು ಗೊತ್ತಿಲ್ಲ . ಊಟಕ್ಕೆ ಕಾರವಾರದಲ್ಲಿ ಬಸ್‌ನ್ನು ನಿಲ್ಲಿಸಿದ್ದರು. ಆಗ ಸುಮಾರು ರಾತ್ರಿ 10.30 - 11.00 ಗಂಟೆಯಾಗಿತ್ತು. ಕಾರವಾರದಿಂದ ಅಪಘಾತ ಸ್ಥಳ ಸುಮಾರು 400 ಮೀಟರ್ ಆಗುತ್ತದೆ ಎಂದರೆ ಕಿಲೋ ಮೀಟರ್ ಗೊತ್ತಾಗುವುದಿಲ್ಲ. ಅಪಘಾತ ನಡೆದಾಗ ನಾನು ನಿದ್ರೆ ಮಾಡುತ್ತಿದ್ದೆ. ನನಗೆ ಆಸ್ಪತ್ರೆಯಲ್ಲಿ ಎಚ್ಚರ ಬಂದಿರುತ್ತದೆ. ನನಗೆ ಎಚ್ಚರವಾದಾಗ ನಾನು ದಾವಣಗೆರೆ ಆಸ್ಪತ್ರೆಯಲ್ಲಿ ಇದ್ದೆ. ಅಪಘಾತ ಹೇಗಾಯಿತು ನನಗೆ ಗೊತ್ತಿಲ್ಲ. ಬಸ್ ಡ್ರೈವರ್ ಬಸ್‌ನ್ನು ಲಾರಿಯ ಹಿಂಭಾಗಕ್ಕೆ ಹೋಗಿ ಗುದ್ದಿರುತ್ತಾರೆ ಎಂದರೆ ಸರಿಯಲ್ಲ . ಲಾರಿಯೇ ಬಂದು ಬಸ್‌ಗೆ ಗುದ್ದಿರುತ್ತದೆ. ನಾನು ನಿದ್ದೆ ಮಾಡುತ್ತಿದ್ದೆ, ಹಾಗಾಗಿ ನನಗೆ ಏನೂ ಗೊತ್ತಿಲ್ಲ ಎಂದರೆ ಸರಿ . ಅಪಘಾತ ಬಸ್ ಚಾಲಕನ ತಪ್ಪಿನಿಂದ ಆಗಿರುವುದರಿಂದ 2 ನೇ ಎದುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ . ಅಪಘಾತದಲ್ಲಿ ನಾನು ಹೇಳುವಂತೆ ನನಗೆ ಯಾವುದೇ ತೀವ್ರ ಸ್ವರೂಪದ ಗಾಯವಾಗಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಹಾಗೂ ಪ್ರಮಾಣಪತ್ರದಲ್ಲಿ ಬರೆದಷ್ಟು ಹಣವನ್ನು ಚಿಕಿತ್ಸೆಗಾಗಿ ಹಾಗೂ

ತಿರುಗಾಡಲು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ . ನಾನು ಅರ್ಜಿ ಹಾಗೂ ಪ್ರಮಾಣಪತ್ರದಲ್ಲಿ ಹೇಳಿದಂತೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ . ಪುನಃ ಪುನಃ ಆಸ್ಪತ್ರೆಗೆ ಚಿಕಿತ್ಸೆಗಾಗಿ ಭೇಟಿ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ.

**2.** ಅಪಘಾತದ ಸಮಯದಲ್ಲಿ ನಾನು ಮೀನುಗಾರಿಕೆ ವ್ಯಾಪಾರ ಮಾಡುತ್ತಿದ್ದೆ, ಆದ್ದರಿಂದ ತಿಂಗಳಿಗೆ ರೂ. 25,000-00 ಆದಾಯ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು 5 ನೇ ಕ್ಲಾಸಿನವರೆಗೆ ಓದಿರುತ್ತೇನೆ. ನನಗೆ ಅಪಘಾತ ಸಮಯದಲ್ಲಿ ಇಂತಿಷ್ಟು ವರ್ಷ ವಯಸ್ಸಾಗಿತ್ತು ಎಂದು ತೋರಿಸಲು ಶಾಲಾ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಅಷ್ಟೆಲ್ಲ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ . ಅಪಘಾತ ಸಮಯದಲ್ಲಿ ನನಗೆ 60 ಕ್ಕಿಂತ ಜಾಸ್ತಿ ವಯಸ್ಸಾಗಿತ್ತು , ಕಾರಣ ಬುದ್ಧ್ಯಾ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ . ಅಪಘಾತದಿಂದಾದ ಗಾಯದಿಂದ ನನಗೆ ಯಾವುದೇ ಆದಾಯ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ . ನಿ.ಪಿ. 29 ದಾಖಲಾತಿ ನನಗೆ ಸಂಬಂಧಪಟ್ಟಿದ್ದು ಅಲ್ಲ ಎಂದರೆ ಸರಿಯಲ್ಲ. ನಿ.ಪಿ.33 ಮತ್ತು ನಿ.ಪಿ.34 ದಾಖಲಾತಿಗಳು ಈ ಅಪಘಾತಕ್ಕೆ ಸಂಬಂಧಪಟ್ಟಿಲ್ಲ ಹಾಗೂ ಈ ಅಪಘಾತಕ್ಕೆ ಸಂಬಂಧಪಟ್ಟಂತೆ ಚಿಕಿತ್ಸೆ ಪಡೆದ ದಾಖಲಾತಿಗಳು ಅಲ್ಲ ಎಂದರೆ ಸರಿಯಲ್ಲ . ನಿ.ಪಿ.36 ರಿಂದ ನಿ.ಪಿ.40 ದಾಖಲಾತಿಗಳನ್ನು ಪರಿಹಾರದ ಸಲುವಾಗಿ ಸೃಷ್ಠಿ ಮಾಡಿದ ದಾಖಲಾತಿಗಳು , ಅವುಗಳಲ್ಲಿ ಯಾವುದೇ ವೈದ್ಯರ ಸಹಿ ಇಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ಲಾರಿ ಚಾಲಕನಿಗೆ ಸೂಕ್ತ ಚಾಲನಾ ಪರವಾನಿಗೆ ಇರಲಿಲ್ಲ ಹಾಗೂ ಲಾರಿಗೆ ಫಿಟನೆಸ್ ಹಾಗೂ ಪರ್ಮಿಟ್ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ . ಆ ಕಾರಣದಿಂದ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.



**ಪಾಟೀ ಸವಾಲುಃ 4 ನೇ ಎದುರುದಾರರ ಪರ ಶ್ರೀ ವೈ.ವಿ.ಎಸ್. ವಕೀಲರಿಂದಃ**

ಅಪಘಾತದ ನಂತರ ನಾನು ಲಾರಿ ಅತೀ ವೇಗವಾಗಿ ಮುಂದುಗಡೆ ಹೋಗುತ್ತಿತ್ತು , ಏಕಾಏಕಿ ಯಾವುದೇ ಸಂಜ್ಞೆ ತೋರಿಸದೇ ಬ್ರೇಕ್ ಹಾಕಿದ್ದರಿಂದ ಹಿಂದಿನಿಂದನಿಧಾನವಾಗಿ ಹೋಗುತ್ತಿದ್ದ ಬಸ್ ಡಿಕ್ಕಿಯಾಯಿತು ಎಂದು ಗೊತ್ತಾಯಿತು .

ಅಪಘಾತದ ನಂತರ ಲಾರಿಯ ಚಾಲಕ ಪರಾರಿಯಾಗಿರುತ್ತಾನೆ ಎಂದರೆ ಸರಿ. ಈ ಅಪಘಾತ ಲಾರಿ ಚಾಲಕನ ತಪ್ಪಿನಿಂದ ಆಗಿರುತ್ತದೆ, ಬಸ್ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ. ಲಾರಿ ಮಾಲಿಕರು ಹಾಗೂ ಸದರಿ ವಾಹನದಇನ್ಸೂರೆನ್ಸ ಕಂಪನಿಯವರು ಮಾತ್ರ ಪರಿಹಾರ ಕೊಡಲು ಬಾಧ್ಯಸ್ಥರು ಎಂದರೆ ಸರಿ.

ಈ ಹಂತದಲ್ಲಿ 4 ನೇ ಎದುರುದಾರರ ಪರ ವಕೀಲರು 2 ನೇ ಎದುರುದಾರರ ಮೇಲ್ಕಂಡ ಪಾಟೀ ಸವಾಲನ್ನು ಅನುಮೋದಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.
ಕುಮಟಾ